
# ಕಥನದ ಅಭಯ



ಕಲೆ: ಅಡ್ವೆ ಸದಾಶಿವ

ಕೊರೊನಾ ಸಾಂಕ್ರಾಮಿಕ ನಮ್ಮನ್ನು ಹಲವು ರೀತಿಯಲ್ಲಿ ಕಾಡಿದೆ, ಹಿಂಡಿಹಾಕಿದೆ. ಅದರಿಂದಾಗಿ ನಮ್ಮ ದೈನಿಕದ ಬದುಕಿನ ಚಲನೆಗೆ ಅಡ್ಡಿ ಆತಂಕಗಳು ಎದುರಾಗಿವೆ. ರೋಗ ಸೃಷ್ಟಿಸಿದ ದಾರುಣ ಚಿತ್ರಗಳನ್ನು ನಾವು ಎಂದಿಗೂ ಮರೆಯಲಾಗದು. ರೋಗದ ಮುಂದೆ ಮನುಷ್ಯ ಎಂತಹ ಅಸಹಾಯಕ, ನಿರ್ಬಲ ಜೀವಿ ಎಂಬುದು ಎಲ್ಲರ ಅರಿವಿಗೆ ಬರುತ್ತಿದೆ. ಬದುಕಿನ ಸಂಕ್ಷಿಪ್ತತೆ ಮತ್ತು ಮಿತಿ ಅರಿವಿಗೆ ಬರುವುದು ತಲೆಯ ಮೇಲೆ ಸಾವಿನ ನೆರಳು ಚಾಚಿರುವ ಇಂತಹ ವೇಳೆಯಲ್ಲಿ. ಇದೇ ಸಾವು ಮನುಷ್ಯನ ಕ್ರಿಯಾಶೀಲತೆಯ ಮೂಲ. ಅಮರತ್ವವನ್ನು ಸಾಧಿಸಲು ಮನುಷ್ಯ ಮಾಡಿದ ಪ್ರಯತ್ನಗಳೇ ಅವನು ಕಟ್ಟಿದ ಬೃಹತ್ ಕಟ್ಟಡಗಳು, ಕೆತ್ತಿದ ಶಿಲ್ಪಗಳು, ಬರೆದ ಮಹಾಕಾವ್ಯಗಳು, ಕಲಾಕೃತಿಗಳು ಮತ್ತು ಅಧಿಕಾರದ ಸ್ಥಾನಗಳು. ನಾಲ್ಕುಕಾಲ ತನ್ನ ಹೆಸರು ಉಳಿಸಲು ವ್ಯಕ್ತಿಯೊಬ್ಬ ಮಾಡುವ ಪ್ರಯತ್ನಗಳು, ಪರದಾಟಗಳು, ತಡಕಾಟಗಳು ಮನುಷ್ಯನ ಸ್ವಭಾವ, ಕ್ರಿಯಾಶೀಲತೆಯ ಬಗ್ಗೆ ಹೊಸ ಅಂಶಗಳನ್ನು ಕಾಣಿಸಬಹುದು.

‘ಅರೇಬಿಯನ್ ನೈಟ್ಸ್’ನ ಶಹಜಾದೆ ಸಾವಿನಿಂದ ತಪ್ಪಿಸಿಕೊಳ್ಳಲು ಪರ್ಷಿಯಾದ ದೊರೆಗೆ ಸಾವಿರದೊಂದು ರಾತ್ರಿಗಳ ಕಾಲ ಕತೆಯನ್ನು ಸೃಷ್ಟಿಸಿ ಹೇಳಿದಳು. ಆಕೆ ಕತೆ ಹೇಳಿಯೇ ಸಾವನ್ನು ಗೆದ್ದಳು. ಕತೆಗಳನ್ನು ಹೇಳುವುದು, ಕೇಳುವುದು, ನೋಡುವುದು ಸಾವಿನಿಂದ ಆಚೆ ಬದುಕನ್ನು ಕಾಣುವಂತೆ ನಮ್ಮನ್ನು ಪ್ರೇರೇಪಿಸುತ್ತದೆ. ಅಷ್ಟೇ ಅಲ್ಲ, ಅದರ ಕುರಿತ ಆತಂಕ, ಭಯವನ್ನು ಕಡಿಮೆ ಮಾಡಿ ಜೀವನದ ಬಗ್ಗೆ, ಸುತ್ತಲಿನ ಜಗತ್ತಿನ ಬಗ್ಗೆ ಪ್ರೀತಿಯನ್ನು, ವಿಸ್ಮಯವನ್ನು, ನಂಬಿಕೆಯನ್ನು ಹುಟ್ಟಿಸುತ್ತದೆ. ಈಗಿನ ಕೊರೊನಾ ಕಾಲದ ಕಥನಗಳು ಮುಂದೊಂದು ದಿನ ಹಲವು ಪ್ರಕಾರಗಳಲ್ಲಿ, ರೂಪಗಳಲ್ಲಿ ಕಲಾಕೃತಿಗಳಾಗಿ ನಮ್ಮ ಮುಂದೆ ಬರಬಹುದು. ಆದರೆ, ಈಗ ಮನುಕುಲ ಎದುರಿಸಿದ ದುರಂತವನ್ನು, ಅದರ ಸ್ವರೂಪವನ್ನು ಅರಿಯಲು ನಾವು ಹಿಂದಿನ ಕೃತಿಗಳಿಗೆ ಹೋಗಬೇಕು. ಅವು ಮನುಷ್ಯನ ಪಾಡನ್ನು, ನರಕವನ್ನು ತೋರುವಂತೆಯೇ ನಾಳೆಗಳ ಬಗ್ಗೆ ಭರವಸೆಯನ್ನು ನಮ್ಮಲ್ಲಿ ತುಂಬುತ್ತವೆ. ನಮ್ಮ ಸಾವನ್ನು, ಯಾತನೆಯನ್ನು ಕೆಲಕಾಲವಾದರೂ ಮುಂದೂಡುತ್ತವೆ, ಮರೆಯುವಂತೆ ಮಾಡುತ್ತವೆ.

ಕೋವಿಡ್ ಕಾಲದಲ್ಲಿ ಸರ್ಕಾರಗಳ ಅಸೂಕ್ಷ್ಮ, ನಿರ್ದಯ, ಬೇಜವಾಬ್ದಾರಿ ಆಡಳಿತದ ಹತಾಶ ಸೋಲನ್ನು ಕಂಡಿದ್ದೇವೆ. ಪ್ರಭುತ್ವಕ್ಕಷ್ಟೇ ಅಲ್ಲ, ವ್ಯವಸ್ಥೆಗೆ ಹಿಡಿದ ರೋಗವೂ ಮನುಷ್ಯನನ್ನು, ಕುಟುಂಬಗಳನ್ನು ಬಲಿ ತೆಗೆದುಕೊಂಡಿದೆ. ಕೊರೊನಾ ಕಣ್ಮರೆಯಾದರೂ ವ್ಯವಸ್ಥೆ ಸರಿಯಾಗಲಾರದು. ಮನುಷ್ಯನ ಉಳಿವು ರಾಜಕೀಯ ಮತ್ತು ಅದರ ಭಾಗವಾದ ವ್ಯವಸ್ಥೆಯ ಕೈಯಲ್ಲೂ ಇದೆ ಎಂಬ ಸತ್ಯ ಈ ಕಾಲದಲ್ಲಿ ಮತ್ತೆ ಸಾಬೀತಾದಂತಾಗಿದೆ. ಈ ಎರಡು ರೋಗಗಳ ವಿರುದ್ಧ ಗಟ್ಟಿಯಾಗಿ ನಿಲ್ಲಲು ಮನುಷ್ಯನಿಗೆ ನೈತಿಕ ಬಲ ಕೊಡುವುದು ಅವನೇ ಸೃಷ್ಟಿಸಿಕೊಂಡ ಹಲವು ಬಗೆಯ ಕಥನಗಳು, ಕಲೆಗಳು. ಕಥನಗಳ ಬಗೆಗಿನ ಕುತೂಹಲವು ಯಾರನ್ನೂ ಏಕಾಂಗಿಯಾಗಿರಲು ಬಿಡುವುದಿಲ್ಲ, ಬದುಕಿನ ಬಗೆಗಿನ ಪ್ರೀತಿಯನ್ನು ಕಡಿಮೆ ಮಾಡುವುದಿಲ್ಲ. ಈ ಸಂಚಿಕೆಯಲ್ಲಿರುವ ವಿಶಿಷ್ಟ ಕತೆಗಳು ಓದುಗರ ಏಕಾಂತಕ್ಕೆ ಜೊತೆಯಾಗಬಲ್ಲವು, ಈ ಕಾಲವನ್ನು ಎದುರಿಸುವ ಧೈರ್ಯ, ಸ್ಥೈರ್ಯವನ್ನು ಕೊಡಬಲ್ಲವು, ಬಾಳಿನ ಬಗೆಗಿನ ನಂಬಿಕೆಯನ್ನು ಹೆಚ್ಚಿಸಬಲ್ಲವು ಎಂಬುದು ನಮ್ಮ ವಿಶ್ವಾಸ.

**ಸಂದೀಪ ನಾಯಕ**